# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

# ಪಿಎಸ್ಐ ಪತ್ರಿಕೆ – 1

**ಪ್ರಶ್ನೆಗಳು**

**ಅಂಕಗಳು : 100**

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

ಹೆಸರು :

ಮೊಬೈಲ್ ನಂ :

**26-12-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

ಅಥವಾ

1. ಭಾರತದ ಆಂತರಿಕ ಭದ್ರತೆಯ ಸಮಸ್ಯೆ ಸವಾಲುಗಳು ಮತ್ತು ಪರಿಹಾರೋಪಾಯಗಳು

ಅಥವಾ

2. ಭಾರತದಲ್ಲಿ ಇ–ಆಡಳಿತದ ಉಪಕ್ರಮಗಳು ಮತ್ತು ಅಂತರ್ಗತ ಬೆಳವಣಿಗೆ

ಅಥವಾ

3. ದಿನೇ ದಿನೇ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳು: ಈ ನಿಟ್ಟಿನಲ್ಲಿ ಮಹಿಳಾ ಸಬಲೀಕರಣದ ತುರ್ತು ಅಗತ್ಯತೆ

ಅಥವಾ

4. ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ ಮತ್ತು ವಾಣಿಜ್ಯೀಕರಣ

ಅಥವಾ

5.ಇಸ್ರೋ ಸಾಧನೆಗಳು ಭಾರತದ ಅಭಿವೃದ್ಧಿಯ ಮನ್ವಂತರಕ್ಕೆ ಸಾಧನಗಳು

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಬಹುತ್ವ ವ್ಯವಸ್ಥೆ (ಮೊದಲು ಗುರಿ ಮುಟ್ಟುವುದು) ಸರಳತೆಯ ಗುಣವನ್ನು ಹೊಂದಿದೆ. ಇತರ ವ್ಯವಸ್ಥೆಗಳಿಗಿಂತ ಹೆಚ್ಚಾಗಿ ಈ ವ್ಯವಸ್ಥೆಯು ಸಂಸತ್ತಿನಲ್ಲಿ ಏಕಪಕ್ಷದ ಬಹುಮತವನ್ನು ತಂದುಕೊಡುತ್ತದೆ. ಆದುದರಿಂದ ಏಕಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ. ಏಕೆಂದರೆ ಇದು ಅತ್ಯಂತ ದೊಡ್ಡ ಪಕ್ಷಕ್ಕೆ ಮತದಾರರ ಬೆಂಬಲವನ್ನು ಹೆಚ್ಚಿಸಿ ತೋರಿಸುತ್ತದೆ. ಸರ್ಕಾರದಲ್ಲಿ ಬದಲಾವಣೆಯನ್ನು ತರಲು ಈ ವ್ಯವಸ್ಥೆಯು ಮತದಾರರ ಅಭಿಪ್ರಾಯದಲ್ಲಾದ ಅಲ್ಪಸ್ವಲ್ಪ ವ್ಯತ್ಯಾಸಗಳನ್ನೂ ದಾಖಲಿಸಲು ಸಮರ್ಥವಾಗಿದೆ. ಈ ಪರಿಣಾಮವು 'ಅಂಚಿನಲ್ಲಿ' ಇರುವ ಮತದಾನ ಕ್ಷೇತ್ರಗಳ ಸಂಖ್ಯೆಯನ್ನು ಅವಲಂಭಿಸುತ್ತದೆ ಎನ್ನುವುದು ದಿಟ್ಟ. ರಾಷ್ಟ್ರೀಯ ಮತವು ಪಕ್ಷಗಳ ನಡುವೆ ಹೇಗೆ ಹಂಚಿಕೆಯಾಗಿದೆ ಮತ್ತು ಮತದಾನ ಕ್ಷೇತ್ರಗಳ ನಡುವೆ ಹೇಗೆ ಹಂಚಿಕೆಯಾಗಿದೆ ಎನ್ನುವುದನ್ನು ಅವಲಂಭಿಸಿ ಈ ವ್ಯವಸ್ಥೆಯು ತೀರ ಅಳತೆಗೆಟ್ಟ ಫಲಿತಾಂಶಗಳನ್ನು ನೀಡಬಹುದು ಎನ್ನುವುದು ಇದರ ಅನನುಕೂಲಕರ ಅಂಶ. ಉದಾಹರಣೆಗೆ, ಪ್ರತಿಯೊಂದು ಮತದಾನ ಕ್ಷೇತ್ರವೂ ನಾಲ್ಕು ಪಕ್ಷಗಳಿಗೆ ದೊರೆತ ಬೆಂಬಲದ ಪ್ರಮಾಣವನ್ನು 40.30.20.10 ಎಂದು ರಾಷ್ಟ್ರೀಯವಾಗಿ ಹಂಚಿಹೋಗಿರುವುದನ್ನು ಯಥಾವತ್ತಾಗಿ ಪ್ರತಿಬಿಂಬಿಸಿದರೆ ಆಗ ಒಂದು ಪಕ್ಷವು ಸಂಸತ್ತಿನ ಎಲ್ಲ ಸ್ಥಾನಗಳನ್ನೂ ಗೆಲ್ಲುತ್ತದೆ ಮತ್ತು ಉಳಿದ ಶೇಕಡಾ 60 ರಷ್ಟು ಮತಗಳನ್ನು ಪೂರ್ಣವಾಗಿ ಪ್ರಾತಿನಿಧ್ಯವಿಲ್ಲದಂತೆ ಮಾಡುತ್ತದೆ. ಅಷ್ಟಕ್ಕೂ ಹೀಗೆ ಎಂದೂ ಆಗುವುದಿಲ್ಲ.. ಆದರೆ ಈ ವ್ಯವಸ್ಥೆಯು ಮತಗಳು ಸಾಂದ್ರೀಕೃತವಾದಂಥ ಕೆಲವು ಪ್ರದೇಶಗಳಲ್ಲಿ ಪಕ್ಷಗಳಿಗೆ ಅನುಕೂಲ ಮಾಡಿಕೊಡುತ್ತದೆ. ಅಲ್ಲದೆ ಮತದಾನ ಕ್ಷೇತ್ರಗಳ ಗಡಿಗಳನ್ನು ಹೇಗೆ ಗುರುತಿಸಲಾಗಿದೆ ಎನ್ನುವುದರ ಮೇಲೆ ಗಮನಾರ್ಹ ಒತ್ತು ಕೊಡುತ್ತದೆ. ಅಲ್ಲದೆ ಈ ವ್ಯವಸ್ಥೆಯು ಮತದಾರರಿಗೆ ಚತುರತೆಯಿಂದ ಮತನೀಡಲು ಉತ್ತೇಜಿಸುತ್ತದೆ. ಮೊದಲ ಆಯ್ಕೆಗೇ ಮತ ನೀಡಬೇಕಾದ ಅಗತ್ಯವಿಲ್ಲ. ಇದರಿಂದ ಫಲಿತಾಂಶವು ಅನಿಯಂತ್ರಿತವಾಗಿರಬಹುದು. ಏಕೆಂದರೆ ಬೇರೆ ಮತದಾರರು ಹೇಗೆ ವರ್ತಿಸುತ್ತಾರೆ ಎಂದು ಅವರಿಗೆ ಖಚಿತವಾಗಿ ತಿಳಿಯಲಾಗುವುದಿಲ್ಲ.

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**India is one of the world's largest producers as consumers of food products, with the sector playing an important role in contributing to the development of the economy .Food and food products are the largest consumption category in India, with a market size of US$ 181 billion.**

**Domestically, the spending on food and food products amounts to nearly 21% of the gross domestic product of the country and constitutes the Indian consumer spending more than a 31% share of wallet. Food processing industry in India is in nascent stage as compared to those of advanced countries. The reason being inadequate processing facilities as well as absence of ready to eat food lifestyle. However, India is one of world's largest food producer in almost all products vis fruits, vegetables, milk,food grains,etc. This indicates vast scope and opportunities for large investments in the food processing industries.**

**Inorder to facilitate and exploit the growth potential of food processing sector, the government on its part has initiated extensive reforms. Some of the key measures undertaken by the government include: amendment of the Agriculture produce Marketing committee Act,rationalisation of food laws, implementaion of the National Horticulture Mission, etc. The government has also outlined a plan to address the low scale of processing activity in the country by setting up the mega food parks, with integrated facilities for procurement, processing, storage and transport. To promote private sector activity and invite foregin investment in the sector, the government allows 100% FDI in the food processing and cold chain infrastructure.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಧರ್ಮ ಅಂದರೆ ಅದೊಂದು ಅಗಾಧ ಪ್ರಭೆ ಅದನ್ನ ಸಂಕುಚಿತ ಮನಸ್ಸಿನವರು ನೋಡಲು ಸಾಧ್ಯವಿಲ್ಲ.ಧರ್ಮ ಜ್ಯೋತಿಯನ್ನು ನೋಡಲು ವಿಶಾಲ ಮನಸ್ಸಿರಬೇಕು.ಶುದ್ಧಮನಸ್ಸಿಲ್ಲದವರಲ್ಲಿ ಧರ್ಮದ ಜ್ಞಾನಜ್ಯೋತಿ ಬೆಳಗುವುದಿಲ್ಲ. ಬದಲಿಗೆ ಅವರ ಬುದ್ಧಿಯನ್ನು ಸುಡುತ್ತದೆ. ಪ್ರಸ್ತುತ ಜಗತ್ತಿನಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಮಾನುಷ ಸಂಘರ್ಷಗಳಿಗೆಲ್ಲಾ ಇಂಥ ಬುದ್ಧಿ ಸುಟ್ಟುಕೊಂಡ ಧರ್ಮಾಂಧರೇ ಮೂಲಕಾರಣ.ಧರ್ಮದ ವಿಚಾರ ಸರಿಯಾಗಿ ಅರ್ಥೈಸದೆ ಬುದ್ಧಿ ಸುಟ್ಟುಕೊಂಡ ಜನರು, ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಾರೆ,ಬುದ್ಧಿ ಇದ್ದರೂ ಮತಿಹೀನರಂತೆ ದುರ್ವರ್ತನೆ ತೋರಿಸುತ್ತಾರೆ.ಧರ್ಮದ ಹೆಸರಲ್ಲಿ ತಾರತಮ್ಯಮಾಡುತ್ತಾ ಮನುಷ್ಯರ ನಡುವೆ ದ್ವೇಷದ ಬೀಜ ಬಿತ್ತುತ್ತಾರೆ. ಧರ್ಮದ ವಿಶಾಲಾರ್ಥ ತಿಳಿಯದ ಇಂಥ ಮೂಢರಿಂದ ಸಾವಿರಾರು ವರ್ಷಗಳಿಂದ ಮನುಕುಲ ನಲುಗುತ್ತಿದೆ.

ದೇವರನ್ನು ಪೂಜಿಸಿದಾಕ್ಷಣ ಹೇಗೆ ಒಲಿಯುವುದಿಲ್ಲವೋ ಹಾಗೇ, ಒಂದು ಧರ್ಮವನ್ನು ಅನುಸರಿಸಿದಾಕ್ಷಣ ಧರ್ಮವಂತರಾಗಲು ಸಾಧ್ಯವಿಲ್ಲ. ಶುದ್ಧಮನಸ್ಸಿನಿಂದ ಪ್ರಾರ್ಥಿಸಿದರೆ ದೇವರು ಒಲಿದಂತೆ, ಧರ್ಮದ ವಿಶಾಲ ಅರ್ಥ ತಿಳಿದವರಿಗೆ ಮಾತ್ರ ಧರ್ಮದ ದರ್ಶನವಾಗುತ್ತದೆ.ಧರ್ಮದ ಬೆಳಕಿನಿಂದ ಉತ್ತಮ ಹಾದಿ ತುಳಿಯಬೇಕೇ ಹೊರತು ಕೆಟ್ಟ ಹಾದಿಯನ್ನಲ್ಲ. ಕೆಟ್ಟ ಹಾದಿ ತುಳಿದವರಿಗೆ ದೇವರು ಕಾಣುವುದಿಲ್ಲ, ಧರ್ಮಜ್ಞಾನವೂ ಸಿದ್ಧಿಸುವುದಿಲ್ಲ. 'ಚಿತ್ತವಿಲ್ಲದೆ ಗುಡಿ ಗೋಪುರ ಸುತ್ತೀದರೇನು ಪ್ರಯೋಜನವಿಲ್ಲ. ಗಾಣದ ಎತ್ತು ಕಣ್ಣು ಮುಚ್ಚಿಕೊಂಡು ಸುತ್ತಿದಷ್ಟೇ ಫಲ. ಅಂತ ಸರ್ವಜ್ಞ ಸುಮ್ಮನೆ ಹೇಳಿಲ್ಲ. ಆಗಿನ ಕಾಲದ ಕುರುಡು ಧರ್ಮಾಚರಣೆ ಕಂಡೇ ಅನುಭಾವಿ ಆಶುಕವಿಯಾದ ಸರ್ವಜ್ಞ ಅರ್ಥರಹಿತ ಧರ್ಮಾಚರಣೆಯನ್ನು ವಿಡಂಬಿಸಿದ್ದಾನೆ.

ಧರ್ಮ ಅನ್ನೋದು ಮನುಕುಲವನ್ನು ಪೊರೆದ ಸುಧಾರಣಮಾರ್ಗ. ಮನುಷ್ಯ ಧರ್ಮಮಾರ್ಗ ಅನುಸರಿಸಿದ್ದರಿಂದಲೇ ಕಾಡಿನಲ್ಲಿ ಮೃಗದಂತೆ ಇದ್ದವನು, ನಾಡು ಕಟ್ಟಿಕೊಂಡು ನಾಗರಿಕನಾಗಿದ್ದಾನೆ. ಇಂಥ ಧರ್ಮದ ವಿಚಾರದಲ್ಲಿ 'ಆ ಧರ್ಮ' ಅಂತ ಭೇದಭಾವ ಮಾಡುವುದು ನಾಗರಿಕತೆಯ ಲಕ್ಷಣವಲ್ಲ. ಎಲ್ಲಾ ಧರ್ಮದೊಳಗಿನ ಉತ್ತಮ ತಿರುಳನ್ನು ತಿಳಿದು ತನ್ನೊಳಗಿನ ತಿಮಿರನ್ನು ಅಳಿಸಿಕೊಂಡು ಜ್ಞಾನವಂತನಾಗುವುದು ಮನುಷ್ಯರ ಲಕ್ಷಣ.